doc-389
T.P-2

Reg B G No. 155

11 - 10 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಪ್ರತಿಯಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸತಂತ್ರ ಕಾಶ್ಮೀರ ಆಸೆ ಬಿಡಲು ಷೇಕ್‌ರಿಗೆ ಜಯಪ್ರಕಾಶರ ಕರೆ

ಶ್ರೀನಗರದಲ್ಲಿ ನಿನ್ನೆ ಜಮ್ಮು-ಕಾಶ್ಮೀರ ರಾಜ್ಯದ ಜನತಾಸಮ್ಮೇಳನವನ್ನು ಸರ್ವೋದಯ ನಾಯಕರಾದ ಶ್ರೀ ಜಯಪ್ರಕಾಶ ನಾರಾಯಣರವರು ಉದ್ಘಾಟಿಸಿಮಾಡುತ್ತ ಭಾರತ ಯೂನಿಯನ್ ಚೌಕಟ್ಟಿನಲ್ಲಿ ಕಾಶ್ಮೀರ ಸಮಸ್ಯೆಗೆ ಪರಿಹಾರ ಕಂಡುಹಿಡಿಯ ಬೇಕೆಂದು ಷೇಕ್ ಅಬ್ದುಲ್ಲ ಮತ್ತು ಅವರ ಅನುಯಾಯಿಗಳಿಗೆ ಒತ್ತಾಯ ಮಾಡಿದರು. ಈ ವಿಚಾರದಲ್ಲಿ ಜನತೆಯ ಮನವೊಲಿಸಿ ಭಾರತಸರ್ಕಾರದೊಂದಿಗೆ ಮಾತುಕತೆ ಪ್ರಾರಂಭಿಸುವಂತೆ ಸೂಚಿಸಿದರು.

ಸ್ವಾಮಿಗಳ ಬೆದರಿಕೆ

ಮುಂದಿನ ಅಕ್ಟೋಬರು ಒಳಗೆ ರಾಜ್ಯ ಹೆಸರನ್ನು ಕರ್ನಾಟಕ ಎಂದು ಬದಲಾಯಿಸದಿದ್ದರೆ ವಿವಿಧ ರೀತಿಯಲ್ಲಿ ಚಳವಳ ಹೂಡಲಾಗುವುದೆಂದು ಉರವಕೊಂಡ ಸ್ವಾಮಿಗಳವರು ರಾಯಚೂರಿನಲ್ಲಿ ತಿಳಿಸಿದರು.

ವಿಷಪಾನದಿಂದ ಸಾವು

ಸೇಲಂ ಜಿಲ್ಲೆಯ ಇಡಿಪಾಡಿಯ ಹತ್ತಿರದ ಕುಟುಂಬವೊಂದರ 5 ಮಂದಿ ವಿಷಪಾನದಿಂದ ನಿನ್ನೆ ಸತ್ತರು. ತನ್ನ ಇಬ್ಬರು ಹೆಣ್ಣು ಮಕ್ಕಳು ಗಂಡಂದಿರನ್ನು ಬಿಟ್ಟು ತಮ್ಮೊಡನೆ ವಾಸಿಸುವುದನ್ನು ಸಹಿಸಲಾರದೆ ತನ್ನ ಇಬ್ಬರು ಪುತ್ರಿಯರು, ಮಗ, ಮೊಮ್ಮಗನಿಗೆ ಕಾಫಿಯಲ್ಲಿ ವಿಷಬೆರಸಿ ತಾನೂ ಸಹ ವಿಷಸೇವಿಸಿ ಸೆಂಬಾಯಿ ಎಂಬಾಕೆ ಸತ್ತಳು.

ಪ್ರವಾಹದ ಹಾವಳಿ

ಕೋಸಿ ನದಿ ಮತ್ತಿತರ ನದಿಗಳ ಹಾವಳಿಯಿಂದ ಬಿಹಾರಿನಲ್ಲಿ ಎರಡೂವರೆ ಸಾವಿರ ಚದುರ ಮೈಲಿಯಲ್ಲಿ ಎರಡು ಮಿಲಿಯ ಜನರು ಕಷ್ಟಕ್ಕೀಡಾಗಿದ್ದಾರೆ. ಒಂದೂವರೆ ಸಾವಿರ ದನಗಳು ಸತ್ತಿವೆ.

○ ಜನತೆಯ ಪ್ರತಿಭಟನೆ ಮನ್ನಿಸಿ ಮಧುರೆಯ ಮೀನಾಕ್ಷಿ ದೇವಾಲಯ ಗರ್ಭಗುಡಿ ಪ್ರವೇಶಕ್ಕೆ ಇದ್ದ 4 ಆಣೆ ಶುಲ್ಕವನ್ನು ಮದರಾಸು ಸರ್ಕಾರ ರದ್ದು ಮಾಡಿದೆ.

ನೇಪಾಳಕ್ಕೆ ಸಹಾಯ

ಸುಮಾರು ಐದೂವರೆ ಕೋಟಿ ರೂ.ಗಳ ಮತ್ತಷ್ಟು ಸಹಾಯವನ್ನು ಭಾರತ ಸರಕಾರ ನೇಪಾಳಕ್ಕೆ ಮಂಜೂರ್ಮಾಡಿದೆ.

ಮಾರಾಟ ತೆರಿಗೆ ಇಲ್ಲ

ಉತ್ತರ ಪ್ರದೇಶದಲ್ಲಿ ಸ್ಥಾಪಿತವಾಗುವ-ಹೊಸ ಕೈಗಾರಿಕೆಗಳು ಮಾರಾಟ ತೆರಿಗೆಯಿಂದ ವಿನಾಯಿತಿ ಪಡೆಯುವುದೆಂದು ಸರ್ಕಾರಿ ಪ್ರಮುಖರೋರ್ವರು ಲಕ್ನೋದಲ್ಲಿ ತಿಳಿಸಿದರು.

ಬೇಸಾಯಕ್ಕೆ ಸಾಲ

ಏಳನೂರು ಕೋಟಿ ರೂಪಾಯಿಗಳ ವರಿಗೆ ಬೇಸಾಯದ ಸಾಲವನ್ನು ಸಹಕಾರ ಸಂಸ್ಥೆಗಳು ನಾಲ್ಕನೆ ಯೋಜನೆಯಲ್ಲಿ ನೀಡಲಿವೆ.

ಜಿಲ್ಲೆಯಲ್ಲಿ ಅಪರಾಧಗಳು

ಕಳೆದ ತಿಂಗಳು ಮೈಸೂರು ಜಿಲ್ಲೆಯಲ್ಲಿ 132 ಅಪರಾಧಗಳು ವರದಿಯಾಗಿರುವುದಾಗಿ ಮೈಸೂರು ಜಿಲ್ಲಾ ಪೊಲೀಸ್ ಸೂಪರಿನ್‌ಟೆಂಡೆಂಟ್ ಶ್ರೀ ಬಾಗಲತಾಯ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

★

—

● ದಸರಾ ಜಂಬೂಸವಾರಿ ಸಂದರ್ಭದಲ್ಲಿ ಉತ್ತಮ ಪೊಲೀಸ್ ವ್ಯವಸ್ಥೆಗಾಗಿ ಡಿಐಜಿ ಶ್ರೀ ವೀರಭದ್ರಯ್ಯನವರಿಗೆ ಭಂಗಾರದ ಟೈಪಿನ್ ಮತ್ತು ಎಸ್‌ಪಿ ಶ್ರೀ ಬಾಗಲತಾಯರಿಗೆ ಭಂಗಾರದ ಕಫ್ ಕೊಂಡಿಯನ್ನೂ ಕೊಟ್ಟಿದ್ದಾರೆ.

● ಏದನೆಯ ಟೆಲಿವಿಷನ್ ನಿಲ್ದಾಣ ನಿರ್ಮಾಣ ಕಾರ್ಯದಲ್ಲಿ ಪಾಕೀಸ್ತಾನ ತ್ವರಿತವಾಗಿದೆ.

★ ಪ್ರತಿ ರಾಜ್ಯದಲ್ಲೂ ಕ್ಯಾನ್ಸರ್ ಮಂಡಲಿಯ ರಚನೆ ಆಗಬೇಕೆಂದು ಕೇಂದ್ರ ಸರ್ಕಾರದ ಆರೋಗ್ಯ ಮಂತ್ರಿ ಶಾಖೆ ಸೂಚಿಸಿದೆ.

ಫೈಬರ್ ಫೋಮ್ (ಪ್ರೈ.) ಲಿ.,

ಪೋಸ್ಟ್ ; ಬೆಲಯೂ ಪಟಿಮ್ (ಕೇರಳ)

★

ರಬ್ಬರ್‌ನಂತೆ ರೂಪಿಸಲ್ಪಟ್ಟ ನಾರಿನ ಮೆತ್ತೆಯನ್ನು ವೈಭವವೆಂದು ಯೋಚಿಸುವ ಜನರಿಗೆ

★ಇಲ್ಲೊಂದು ವಾರ್ತೆ! ★ನಿಜ! ಬೆಲೆಯನ್ನು ಹೊರತಾಗಿ

ಅದು ಫೈಬರ್ ಫೋಮ್ ಆದಾಗ,

● ಮೆತ್ತೆಯ ಸೌಖ್ಯದ ಹೊಸ ಅನುಭವ! ● ಆರಾಮ ಮತ್ತು ತಂಪು!
● ಶುಭ್ರಗೊಳಿಸಬಹುದು! ● ಸಚ್ಛಿದ್ರ! ● ಬಹಳ ಹಗುರ!
● ಹೆಚ್ಚು ಆರೋಗ್ಯಕಾರಕ! ● ಹೆಚ್ಚು ಉಪಯೋಗಕಾರಕ! ● ಬಹುಕಾಲಬಾಳಿಕೆ!

ಅದರ ಬಳಕೆ

○ನುನೆಗಳ, ○ಫಲಾಹಾರ ಮಂದಿರಗಳ, ○ಆಸ್ಪತ್ರೆಗಳ, ○ಸಾರಿಗೆಸಂಸ್ಥೆಗಳ
○ವಾಹನ ಕೈಗಾರಿಕೆಗಳ, ○ಉಪಕರಣಗಳ ಮತ್ತು ವೈಜ್ಞಾನಿಕ ಕೈಗಾರಿಕೆಗಳ,
○ಶೈತ್ಯಾಗಾರ ಕೈಗಾರಿಕೆಗಳ ಪೂರೈಕೆಗಾಗಿ.

★

ತಡಮಾಡಬೇಡಿ! 'ಫೈಬರ್ ಫೋಮ್'ರವರನ್ನು ಸಂಧಿಸಿ

ಈ ಕೆಳಗಿನವರನ್ನು ಸಂಧಿಸಿ—

ಕೊಯಿರ್ ಬೋರ್ಡ್ (ಕೇಂದ್ರಸರ್ಕಾರ) ಪೆವಿಲಿಯನ್
ದಸರಾ ವಸ್ತುಪ್ರದರ್ಶನ, ಮೈಸೂರು.

ಅಪ್ಸರ ಏಜನ್ಸೀಸ್ (ಸ್ಟಾಲ್ ನಂ. 1 ರಿಂದ 4 R ಬ್ಲಾಕ್)
ದಸರಾ ವಸ್ತುಪ್ರದರ್ಶನ, ಮೈಸೂರು.

ಎಸ್. ಎನ್. ಡಿ. & ಸನ್ಸ್ (ಸ್ಟಾಲ್ ನಂ. 6-7 ಡಿ. ಬ್ಲಾಕ್)
ದಸರಾ ವಸ್ತುಪ್ರದರ್ಶನ, ಮೈಸೂರು.

★

ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹಂಚಿಕೆದಾರರಾಗಿ
ಕೆಲಸ ಮಾಡಲು ಇಷ್ಟವುಳ್ಳವರು ಮೇಲಿನ ಸ್ಟಾಲುಗಳಲ್ಲಿ
ಮೊಖ್ತಾ ಬಂದು ನಮ್ಮ ಪ್ರತಿನಿಧಿಯನ್ನು ಭೇಟಿ ಮಾಡಲಿ.

ಕಬ್ಬಿಲ್ಲದೆ ಗೌರೀಬಿದನೂರು ಸಕ್ಕರೆ ಕಾರ್ಖಾನೆ ಮುಚ್ಚುವ ಸ್ಥಿತಿಯಲ್ಲಿದೆ.

ಹಿಂದೂಗಳ ಆಚಾರ

ಗ್ರಾಹಕರು — "ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

— ಆಚಾರಃ ಪ್ರಥಮೋ ಧರ್ಮಃ —

"ಧ್ರಿಯತೆ ಲೋಕಃ ಅನೇನ ಇತಿ ಧರ್ಮಃ"

ಧಾರಣಾದ್ಧರ್ಮ ಇತ್ಯಾಹುಃ ಧರ್ಮೋಧಾರಯತೆ ಪ್ರಜಾಃ।
ಯಃಸ್ಯಾದ್ಧಾರಣ ಸಂಯುಕ್ತಃ ಸಧರ್ಮ ಇತಿ ನಿಶ್ಚಯಃ॥

'ಜಗತಃ ಸ್ಥಿತಿ ಕಾರಣಂ ಪ್ರಾಣಿನಾಂ ಸಾಕ್ಷಾದಭ್ಯುದಯ ನಿಃ ಶ್ರೇಯಸ ಹೇತುಃ ಯಃ ಸಧರ್ಮಃ"

'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ'

ಯಾವುದರಿಂದ ಈ ಲೋಕವು ಧರಿಸುತ್ತದೋ ಅದೇ ಧರ್ಮ.

ಧರ್ಮದಿಂದಲೇ ನಮ್ಮ ಧಾರಣೆ, ರಕ್ಷಣೆ ಮತ್ತು ಪೋಷಣೆ ಯಾಗುವುದು. ಪ್ರಜೆಗಳನ್ನು ಧರ್ಮವೇ ಧಾರಣ ಮಾಡುವುದು. ನಮ್ಮ ಇಹಲೋಕದ ಸುಖದ ಬಳಿಗೂ, ಪರಲೋಕದ ಶ್ರೇಷ್ಠ ಗತಿಗೂ ಧರ್ಮ ಒಂದೇ ಕಾರಣವಾಗಿದೆ.

ಯಾವ ವ್ಯವಸ್ಥೆಯು, ಯಾವ ಚರ್ಯೆಯು ಲೋಕದ ಒಳ್ಳೆಯ ಸ್ಥಿತಿಗೆ ಸಾಧಕವಾಗಿ, ಜೀವಿಗಳಿಗೆ ಇಹದಲ್ಲಿ ಯೋಗಕ್ಷೇಮವನ್ನೂ ಪರದಲ್ಲಿ ಸದ್ಗತಿಯನ್ನೂ ಸಂಪಾದಿಸಿಕೊಡಬಲ್ಲುದೋ ಅದೇ ಧರ್ಮ.

ಅಖಿಲ ಜಗತ್ತಿನ ಸ್ಥಿತಿಗೆ ಜೀವಾಧಾರವಾಗಿರುವಂಥಾದ್ದೇ ಧರ್ಮ.

ಮೈಸೂರು

ದಸರಾ ವಸ್ತುಪ್ರದರ್ಶನ

1968

ವಿಶೇಷ ಮನರಂಜನೆಯ ಕಾರ್ಯಕ್ರಮ

ದಿನಾಂಕ ೧೩ನೇ ಅಕ್ಟೋಬರ್ ಶನಿವಾರ ಸಂಜೆ

7 ಘಂಟೆಗೆ

ಶ್ರೀಮತಿ ಡಿ. ಕೆ. ಪಟ್ಟಮ್ಮಾಳ್ ಮದರಾಸು ಇವರಿಂದ

ಅಮೋಘ ಸಂಗೀತ ಕಛೇರಿ

ವಸ್ತುಪ್ರದರ್ಶನದ ಕಲಾಕ್ಷೇತ್ರದಲ್ಲಿ ಏರ್ಪಡಿಸಿರುತ್ತೆ

ಪ್ರವೇಶದರ—50 ಪೈಸೆ

ಓರಿಯಂಟಲ್ ಡ್ರಾನ್ಸ್

ಮೈಸೂರು ದಸರಾ ವಸ್ತುಪ್ರದರ್ಶನ ನಡೆಯುತ್ತಿರುವ

ಜೀವಣರಾಯನ ಕಟ್ಟೆಯಲ್ಲಿ

ಚಿತ್ರತಾರೆಗಳಿಂದ ಅಮೋಘ ನರ್ತನಗಳು

ತಪ್ಪದೇ ಸೋದರಿ ಆನಂದಿಸಿರಿ

ಪ್ರವೇಶಧನ : ರೂ. 1 ಮತ್ತು 50 ಪೈಸೆ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4

ದಸರಾ ವಸ್ತುಪ್ರದರ್ಶನ

1968

ವಿಶೇಷ ಮನರಂಜನೆಯ ಕಾರ್ಯಕ್ರಮ

ದಿನಾಂಕ ೧೩ನೇ ಅಕ್ಟೋಬರ್ ಭಾನುವಾರ

ಸಂಜೆ 7 ಘಂಟೆಗೆ

ಶ್ರೀಯುತ ಎಸ್. ಕೃಷ್ಣರಾವ್ ಮತ್ತು ಶ್ರೀಮತಿ ಚಂದ್ರಭಾಗದೇವಿ, ಬೆಂಗಳೂರು ಇವರಿಂದ

ಅಮೋಘ ನೃತ್ಯ ಪ್ರದರ್ಶನವನ್ನು

ವಸ್ತುಪ್ರದರ್ಶನದ ಕಲಾ ಕ್ಷೇತ್ರದಲ್ಲಿ ಏರ್ಪಡಿಸಿರುತ್ತೆ

ಪ್ರವೇಶ ದರ 50 ಪೈಸೆ

ವುಡ್‌ಲಾಂಡ್ ಜನಪ್ರಿಯ 5ನೇ ವಾರ

ವೈಭವ ಆರಂಭ

— ಮನಮೋಹಕ ಹಿಂದಿ ಚಿತ್ರ —

ನೀಲ್ ಕಮಲ್ ★ Neel Kamal

ಈಸ್ಟ್‌ಮನ್ ಕಲರ್

.... ಮಿಲಿಯಗಟ್ಟಲೆ ಖರ್ಚಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್

ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರ— 11-10-68 ರಿಂದ

ಮನಮೋಹಕ ತಮಿಳು ಚಿತ್ರ — — ದಿನವಹಿ 3 ಆಟಗಳು

ನೇರ್ ವಳಿ

ನಟವರ್ಗ— ಜಯಶಂಕರ್, ಆನಂದ್, ಮನೋಹರ್, ನಾಗೇಶ್, ಸುಂದರರಾಜ್

ವಾಣಿಶ್ರೀ, ಚಂದ್ರಿಕಾ, ಮನೋರಮ, ವಿಜಯಲಲಿತ

Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ಅಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ನಮ್ಮಲ್ಲಿ ದೊರೆಯುತ್ತವೆ

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ